


ಸಂಗೀತ ಸುಧಾ ಯೂಟ್ಯೂಬ್ ಚಾನೆಲ್ ಲಿಂಕ್:
https://www.youtube.com/@SangeetaSudha

## ಸಂಗೀತ ಸೃಜಿಸಿದ ಸಾಹಿತ್ಯದ ವಿಧಗಳು

- ಬಸವಣ್ಣನವರ ವಚನಗಳು
- ಅಕ್ಕಮಹಾದೇವಿಯವರ ವಚನಗಳು
- ಪುರಂದರ ದಾಸರ ಕೀರ್ತನೆಗಳು
- ಕನಕದಾಸರ ಕೀರ್ತನೆಗಳು
- ಕವಿರಾಜಮಾರ್ಗದ ಪ್ರಾತಿನಿಧಿಕ ಪದ್ಯಗಳು
- ಪಂಪಭಾರತದ ಪ್ರಾತಿನಿಧಿಕ ಪದ್ಯಗಳು
- ಕುಮಾರವ್ಯಾಸ ಭಾರತದ ಪ್ರಾತಿನಿಧಿಕ ಪದ್ಯಗಳು
- ಜೈಮಿನಿ ಭಾರತದ ಪ್ರಾತಿನಿಧಿಕ ಪದ್ಯಗಳು
- ಬಾದಾಮಿಯ ಕಪ್ಪೆ ಅರ್ಭಟನ ಶಾಸನ
- ಮಹಾಲಿಂಗರಂಗನ ಪ್ರಾತಿನಿಧಿಕ ಪದ್ಯ
- ಮಂಕುತಿಮ್ಮನ ಕಗ್ಗ
- ಸರ್ವಜ್ಞ ವಚನಗಳು
- ಬಿ. ಎಂ. ಶ್ರೀ. ಅವರ ಇಂಗ್ಲಿಷ್ ಗೀತೆಗಳು
- ಮಿರ್ಜಾ ಗಾಲಿಬ್ ಶಾಯರಿಗಳು ಮತ್ತು ಗಜಲ್‌ಗಳು
- 1ನೇ ತರಗತಿಯಿಂದ 10ನೇ ತರಗತಿಯ ಕನ್ನಡ ಭಾಷೆಯ ಪದ್ಯಗಳು ಹಾಗೂ ಇತ್ಯಾದಿ.

ಬಸವಣ್ಣನವರ ವಚನಗಳ ಹೊರತಾಗಿ ಕನಕದಾಸ, ಪುರಂದರದಾಸರ ದಾಸ ಸಾಹಿತ್ಯಕ್ಕೂ ವ್ಯಾಪಿಸಿದೆ. ಶಾಸನಗಳ ಪಠ್ಯಗಳನ್ನೂ ನಾವು ಸಂಗೀತ ರೂಪದಲ್ಲಿ ರೂಪಿಸಿದ್ದೇವೆ. ಬಾದಾಮಿಯ ಶಾಸನದ ಪಠ್ಯವನ್ನು ಸಂಗೀತಕ್ಕೆ ಬದಲಿಸಿದ್ದೇವೆ. ಶಾಸನದ ಪಠ್ಯವನ್ನು ಸಂಗೀತದ ಮೂಲಕ ಕೇಳಿ ನಮ್ಮ ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ಶ್ರೀಮಂತಿಕೆ ಇದೆಲ್ಲವನ್ನೂ ಅತ್ಯಾಪ್ತವನ್ನಾಗಿ ಮಾಡುವ ಪ್ರಯತ್ನ ನಡೆಯುತ್ತಿದೆ' ಎಂದು ಸಂತಸ ವ್ಯಕ್ತಪಡಿಸುತ್ತಾರೆ.

### ಪ್ರಾಂಪ್ಟ್‌ಗಾಗಿ ಕಸ್ಟಮ್ ಜಿಪಿಟಿ

ಪದ್ಯಗಳನ್ನು ಸಂಗೀತಮಯಗೊಳಿಸಲು ಸಾಫ್ಟ್‌ವೇರ್‌ಗೆ, ಪದ್ಯಕ್ಕನುಗುಣವಾಗಿ, ಭಾವಕ್ಕನುಗುಣವಾಗಿ ಆದೇಶ ನೀಡಬೇಕಾಗುತ್ತದೆ. ಜನರೇಟಿವ್ ಎಐಗೆ ಈ ಆದೇಶ ನೀಡುವ ವಿಧಾನವೇ ಪ್ರಾಂಪ್ಟ್. ಇದನ್ನು ರಚಿಸುವುದೇ ಎಐ ಸಂಗೀತ ಸೃಜಿಸುವಾಗಿನ ಕ್ಲಿಷ್ಟಕರ ಹಂತ. ಅದಕ್ಕಾಗಿ ಈ ತಂಡ ತನ್ನದೇ ಆದ 'ಕಸ್ಟಮ್ ಜಿಪಿಟಿ' ಮಾದರಿ ಅಭಿವೃದ್ಧಿಪಡಿಸಿಕೊಂಡಿದೆ.

ಕನ್ನಡದ ಪದ್ಯಗಳನ್ನು ಎಐ ಸಂಗೀತದ ಮಾದರಿಯನ್ನಾಗಿಸಲು ಕಸ್ಟಮ್ ಜಿಪಿಟಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿಯೊಂದು ವಚನ, ದಾಸರ ಪದಗಳು, ಹಳೆಗನ್ನಡದ ಪದ್ಯಗಳಿಗೆ ಬೇರೆ ಬೇರೆಯದ್ದೇ ಪ್ರಾಂಪ್ಟ್ ನೀಡಬೇಕಾಗುತ್ತದೆ. ಆ ಪ್ರಾಂಪ್ಟ್ ಸೃಜಿಸಿಕೊಳ್ಳಲು ನಮ್ಮದೇ ಕಸ್ಟಮ್ ಜಿಪಿಟಿ ಅನುಕೂಲಕರವಾಗಿದೆ. ಪ್ರತಿ ಪದಕ್ಕೂ ಅದರದ್ದೇ ಆದ ಅರ್ಥ, ಭಾವ ಹಾಗೂ ಧ್ವನಿಯನ್ನು ಈ ಪ್ರಾಂಪ್ಟ್‌ನಲ್ಲಿ ಟೈಪಿಸಲಾಗುತ್ತದೆ.

ಎಐ ಸಾಫ್ಟ್‌ವೇರ್‌ಗೆ ಆದೇಶ ಕೊಡುವ ವಿಧಾನವಾದ ಪ್ರಾಂಪ್ಟ್ ಅನ್ನು ಸಾಹಿತ್ಯಕ್ಕನುಗುಣವಾಗಿ ರೂಪಿಸಲಾಗುತ್ತದೆ. ಸಾಹಿತ್ಯದ ಒಳಹೂರಣದ ನೆಲೆಗಟ್ಟಿನಲ್ಲಿ ಈ ಪ್ರಾಂಪ್ಟ್ ಬದಲಾವಣೆ ಆಗುತ್ತಿರುತ್ತದೆ. ಹೀಗೆ ಮಾಡಿದರೆ ಮಾತ್ರ ಆಯಾ ಸಾಹಿತ್ಯಕ್ಕನುಗುಣವಾದ ಧ್ವನಿ, ಭಾವ ಲಭ್ಯವಾಗುತ್ತದೆ. ತಂತ್ರಜ್ಞಾನದ ವ್ಯಾಪಕತೆಯನ್ನು ಬಳಸಿಕೊಳ್ಳುವ ಹಲವು ಕವಲುಗಳು ತೆರೆದುಕೊಳ್ಳುತ್ತವೆ.

